

ಒಂದು ಊರಲ್ಲಿ ಒಂದು ನರಿ ಇತ್ತು. ಆ ನರಿಗೇ ತಿನ್ನಲು ಏನೂ ಸಿಗದೆ ತುಂಬಾ ಹಸಿವಾಗಿತ್ತು. ಹಸಿವು ತಣಿಸಿಕೊಳ್ಳಲು ನೀರು ಕುಡಿಯೋಣವೆಂದು ಅದು ನದಿಯ ಬಳಿಗೆ ಹೋಯಿತು.

ನದಿ ತೀರಕ್ಕೆ ಹೋದಾಗ, ಸ್ವಲ್ಪ ದೂರದಲ್ಲಿ ಒಂದು ಕುರಿಮರಿ ನೀರು ಕುಡಿಯುತ್ತಿರುವುದು ನರಿಯ ಕಣ್ಣಿಗೆ ಬಂತು. ಅದನ್ನು ನೋಡಿದ ತಕ್ಷಣ ನರಿಯ ಹಸಿವು ಇನ್ನೂ ಹೆಚ್ಚಾಯಿತು.

“ಈ ಕುರಿಮರಿಯನ್ನು ಹೇಗಾದರೂ ಹಿಡಿದು ತಿನ್ನಬೇಕು” ಎಂದು ನರಿ ಯೋಚಿಸಿತು.

ಆದರೆ ಆ ಕಾಲದಲ್ಲಿ ಕಾರಣವಿಲ್ಲದೆ ಒಂದು ಪ್ರಾಣಿ ಮತ್ತೊಂದು ಪ್ರಾಣಿಯನ್ನು ಹಿಡಿದು ತಿನ್ನುವುದು ಸುಲಭವಾಗಿರಲಿಲ್ಲ. ಯಾವುದಾದರೂ ನೆಪ ಬೇಕಿತ್ತು. ಆದ್ದರಿಂದ ನರಿ ಒಂದು ಸುಳ್ಳು ಕಾರಣ ಹುಡುಕಲು ಪ್ರಾರಂಭಿಸಿತು.

ನರಿ ಕುರಿಮರಿಯ ಹತ್ತಿರ ಹೋಗಿ ಕೋಪದಿಂದ ಹೇಳಿತು:

“ಹೇ! ನಿನಗೆ ತುಂಬಾ ಸೊಕ್ಕು ಬಂದಿದೆ! ನೀನು ನನ್ನ ನೀರನ್ನು ಕಲುಷಿತ ಮಾಡಿ ಕೆಸರನ್ನಾಗಿಸಿದ್ದೀಯೆ. ನಾನು ಕುಡಿಯುವ ನೀರನ್ನು ಕೆಡಿಸಿದೆ. ಈಗಲೇ ನಿನ್ನನ್ನು ಹಿಡಿದು ತಿನ್ನುತ್ತೇನೆ!”

ಇದನ್ನು ಕೇಳಿ ಕುರಿಮರಿ ಹೆದರಿತು. ಆದರೆ ಧೈರ್ಯವಾಗಿ ಉತ್ತರಿಸಿತು:

“ಸ್ವಾಮಿ, ನಾನು ನದಿಯ ಕೆಳಭಾಗದಲ್ಲಿ ನೀರು ಕುಡಿಯುತ್ತಿದ್ದೇನೆ. ನೀವು ಮೇಲ್ಭಾಗದಲ್ಲಿ ನೀರು ಕುಡಿಯುತ್ತಿದ್ದೀರಿ. ನಾನು ಹೇಗೆ ನಿಮ್ಮ ನೀರನ್ನು ಕೆಸರಾಗಿಸಬಹುದು?”

ಕುರಿಮರಿಯ ಮಾತಿಗೆ ಉತ್ತರ ಸಿಗದೆ ನರಿ ಮತ್ತೊಂದು ಸುಳ್ಳು ಹೇಳಿತು:

“ನೀನು ಆರು ತಿಂಗಳ ಹಿಂದೆ ನನ್ನನ್ನು ಬೇಕಾಬಿಟ್ಟಿ ಬೈದಿದ್ದೆ!”

ಕುರಿಮರಿ ಆಶ್ಚರ್ಯಪಟ್ಟು ಹೇಳಿತು:

“ಸ್ವಾಮಿ, ನಾನು ಇನ್ನೂ ಪುಟ್ಟ ಮರಿ. ನನಗೆ ಹುಟ್ಟಿ ಮೂರು ತಿಂಗಳು ಮಾತ್ರ ಆಗಿದೆ. ಆರು ತಿಂಗಳ ಹಿಂದೆ ನಾನು ಹುಟ್ಟೇ ಇರಲಿಲ್ಲ. ಹಾಗಾದರೆ ನಾನು ನಿಮ್ಮನ್ನು ಬೈದಿರಲು ಹೇಗೆ ಸಾಧ್ಯ?”

ಇದನ್ನು ಕೇಳಿ ನರಿ ಇನ್ನೂ ಕೋಪಗೊಂಡು ಹೇಳಿತು::

“ಏನು? ನಾನು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುತ್ತಿದ್ದೀಯಾ? ಹಾಗಾದರೆ ನಿನ್ನ ಅಮ್ಮ ಅಥವಾ ನಿನ್ನ ಅಪ್ಪ ನನ್ನನ್ನು ಬೈದಿರಬೇಕು!”
ಹೀಗೆ ಹೇಳಿ ನರಿ ಕುರಿಮರಿಯ ಕಾಲನ್ನು ಹಿಡಿದುಕೊಂಡಿತು.
ಕುರಿಮರಿ ತುಂಬಾ ಹೆದರಿ ಬೇಡಿಕೊಂಡಿತು:
“ಸ್ವಾಮಿ, ನನ್ನ ಅಪ್ಪ-ಅಮ್ಮ ಮಾಡಿದ ತಪ್ಪಿಗೆ ನನಗೆ ಶಿಕ್ಷೆ ನೀಡುವುದು ಯಾವ ನ್ಯಾಯ? ಇದು ಸರಿಯಾದ ನಡತೆನಾ? ನಿಮ್ಮಂತಹ ಬುದ್ಧಿವಂತರು ಹೀಗೆ ವರ್ತಿಸಬಹುದೇ?”
ಆದರೆ ನರಿ ಕರುಣೆಯಿಲ್ಲದೆ ಹೇಳಿತು:
“ನಾನು ನ್ಯಾಯಶಾಸ್ತ್ರವನ್ನು ಚೆನ್ನಾಗಿ ಅರಿತಿದ್ದೇನೆ. ಅಪ್ಪ-ಅಮ್ಮನ ಭಾಗ್ಯದಲ್ಲಿ ಪಾಲು ಬೇಕು ಎಂದರೆ ಅವರ ಪಾಪದಲ್ಲೂ ಪಾಲು ಇರಲೇಬೇಕು. ಅವರು ಮಾಡಿದ ಕರ್ಮವನ್ನು ನೀನೇ ಅನುಭವಿಸಬೇಕು!”
ಅಷ್ಟೆಂದು ಹೇಳಿ ನರಿ ಕುರಿಮರಿಯನ್ನು ಹಿಡಿದು ತಿಂದಿತು.

ಕಥೆಯ ನೀತಿ

ಬಲಿಷ್ಠನಿಗೆ ಅನ್ಯಾಯ ಮಾಡಲು ಕಾರಣ ಬೇಕಾಗಿಲ್ಲ.
ನ್ಯಾಯವಂತಿಕೆ ಇಲ್ಲದವನ ಕೈಯಲ್ಲಿ ಸತ್ಯವೂ ಸೋಲಬಹುದು